## ಟ್ಯಾಬ್ಲೆಟ್‌ನಲ್ಲಿ ಇ-ಮೇಲ್

ರಿಮ್ಸ್ ಪ್ಲೇಬುಕ್ ಟ್ಯಾಬ್ಲೆಟ್ ಕಂಪ್ಯೂಟರ್‌ನಲ್ಲಿ ಈಗ ಇ-ಮೇಲ್ ಅನ್ನು ಆರಾಮವಾಗಿ ಅಂದರೆ ಬ್ಲ್ಯಾಕ್‌ಬೆರ್ರಿಯಲ್ಲಿ ಮಾಡಿದಷ್ಟೇ ಸರಳವಾಗಿ ನೋಡಬಹುದು. ಈ ಮೊದಲು ಟ್ಯಾಬ್ಲೆಟ್ ಸಂಪರ್ಕವನ್ನು ಬ್ಲ್ಯಾಕ್‌ಬೆರ್ರಿಗೆ ಕಲ್ಪಿಸಿಕೊಂಡು ಇ-ಮೇಲ್ ನೋಡಬೇಕಿತ್ತು.

ಈಗ ಕಂಪೆನಿಯ ಕ್ಯೂಎನ್‌ಎಕ್ಸ್ ಆಧಾರಿತ ಕಾರ್ಯನಿರ್ವಹಣೆ ವ್ಯವಸ್ಥೆಯ ಮೇಲೆ ಟ್ಯಾಬ್ಲೆಟ್ ಕೆಲಸ ಮಾಡುತ್ತಿದೆ. ಇದರಲ್ಲಿ ಇ-ಮೇಲ್, ಕ್ಯಾಲೆಂಡರ್ ಮತ್ತು ಕಾಂಟ್ಯಾಕ್ಟ್‌ಗಳನ್ನು ಸೇರಿಸಲಾಗಿದೆ.

## ಒಎಲ್‌ಇಡಿ ಟೀವಿ




ಜಾಗತಿಕ ಟೀವಿ ಮಾರುಕಟ್ಟೆಯಲ್ಲಿ ಪ್ರಮುಖ ಕಂಪೆನಿಯಾದ ಸ್ಯಾಮ್ಸಂಗ್ ಎಲೆಕ್ಟ್ರಾನಿಕ್ಸ್ ಹೊಸ ತಲೆಮಾರಿನ ಒಎಲ್‌ಇಡಿ ತಂತ್ರಜ್ಞಾನ ಆಧಾರಿತ ಟೀವಿ ತಯಾರಿಕೆಗೆ ಕೈ ಹಾಕಿದೆ. ಕಂಪೆನಿಯು ಎಲ್‌ಸಿಡಿ (ಲಿಕ್ವಿಡ್ ಕ್ರಿಸ್ಟಲ್ ಡಿಸ್‌ಪ್ಲೇ) ಟೀವಿ ವಿಭಾಗದಲ್ಲಿ ಭಾರಿ ನಷ್ಟ (750 ಶತಕೋಟಿ ಡಾಲರ್) ಅನುಭವಿಸುತ್ತಿದೆ. ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್ ಮೊದಲಾದವುಗಳಿಗೆ ಸಂಪರ್ಕ ಕಲ್ಪಿಸುವ ಟೀವಿಗಳ ಭರಾಟೆ ಯುಗದಲ್ಲಿ ಈ ನಷ್ಟ ಸ್ವಾಭಾವಿಕ ಎಂದು ಒಪ್ಪಿಕೊಂಡಿರುವ ಕಂಪೆನಿ ಈಗ ಹೈಎಂಡ್ ಸ್ಮಾರ್ಟ್‌ಫೋನ್‌ಗಳಲ್ಲಿ ಬಳಸುವ ಒಎಲ್‌ಇಡಿ (ಆರ್ಗಾನಿಕ್ ಲೈಟ್ ಎಮಿಟಿಂಗ್ ಡಯೋಡ್) ಚಪ್ಪಟೆ ಪರದೆಯ ಟೀವಿಗಳ ತಯಾರಿಕೆಯತ್ತ ಮುಖ ಮಾಡಿದೆ.

ಇದು ಎಲ್‌ಸಿಡಿಗಿಂತ ಹೆಚ್ಚು ತೆಳುವಾದ ಪರದೆ ಹೊಂದಿದ್ದು ಉತ್ತಮ ಗುಣಮಟ್ಟ ಮತ್ತು ಕಲರ್ ಕಾಂಟ್ರಾಸ್ಟ್ ಹೊಂದಿದೆ.

## ಗೂಗ್ಲ್ ಡಾಕ್ಸ್ ಮೇಲ್ದರ್ಜೆಗೆ

ಆ್ಯಂಡ್ರಾಯ್ಡ್‌ಗಾಗಿ ಗೂಗ್ಲ್ ಡಾಕ್ಸ್ ಅಪ್ಲಿಕೇಶನ್ ಅನ್ನು ಗೂಗ್ಲ್ ಕಂಪೆನಿ ಮೇಲ್ದರ್ಜೆಗೇರಿಸಿದೆ. ಡೆಸ್ಕ್‌ಟಾಪ್‌ನಲ್ಲಿರುವ ಗೂಗ್ಲ್ ಡಾಕ್ಸ್ ಈಗ ಆ್ಯಂಡ್ರಾಯ್ಡ್ ಫೋನ್‌ನಲ್ಲೂ ಲಭ್ಯ. ಇದಲ್ಲದೇ ಫೋನ್ ಪರದೆಯನ್ನು ಬಳಕೆದಾರರು ಚಿವುಟಿದರೆ ಸಾಕು, ಇಂಟರ್‌ನೆಟ್ ದಾಖಲೆಗಳನ್ನು ದೊಡ್ಡದಾಗಿ ಅಥವಾ ಸಣ್ಣದಾಗಿ ಮಾಡಿಕೊಳ್ಳಬಹುದು. ಜೊತೆಗೆ ವಿವಿಧ ಬಣ್ಣಗಳನ್ನೂ ಬಳಕೆದಾರರು ಆಯ್ಕೆ ಮಾಡಿಕೊಂಡು ಈ ದಾಖಲೆಗಳಿಗೆ ಸೇರಿಸಬಹುದು. ಅಂದರೆ ಕ್ರೋಮ್ ಮತ್ತು ಫೈರ್‌ಫಾಕ್ಸ್ ಅಪ್ಲಿಕೇಶನ್ ಕೂಡಾ ಲಭ್ಯ.

## ಟಚ್ ಪ್ಯಾನೆಲ್

ಟೇಬಲ್ ಗೇಮ್ಸ್‌ಗಳಿಗಾಗಿ ಅಭಿವೃದ್ಧಿಪಡಿಸಿರುವ ಟಚ್ ಪ್ಯಾನೆಲ್‌ಗಳು ಈಗ ತಮ್ಮನ್ನು ಮುಟ್ಟಿದವರನ್ನು ಗುರುತಿಸುವ ಸಾಮರ್ಥ್ಯ ಹೊಂದಿವೆ.

ಜಪಾನಿನ ಗುಂಝೆ ಹೊರ ತಂದಿರುವ ಈ ಪ್ಯಾನೆಲ್‌ಗಳ ಮೇಲೆ ನಾಲ್ಕು ಎಲೆಕ್ಟ್ರೋಡ್‌ಗಳನ್ನು ಅಳವಡಿಸಲಾಗಿದ್ದು ಬಳಕೆದಾರರು ಒಂದು ಎಲೆಕ್ಟ್ರೋಡ್ ಮೇಲೆ ಕೈ ಇಟ್ಟು ಇನ್ನೊಂದರಿಂದ ಪ್ಯಾನೆಲ್‌ನಲ್ಲಿ ಅಳವಡಿಸಲಾಗಿರುವ ಆಟ ಅಥವಾ ಅಪ್ಲಿಕೇಶನ್ ಬಳಸಬಹುದು. ನಾಲ್ವರು ಆಟ ಆಡಬಹುದಾದ ಈ ಪ್ಯಾನೆಲ್‌ನಲ್ಲಿ ಸರ್ಕಿಟ್ ಪೂರ್ಣಗೊಳಿಸಬೇಕಾಗುತ್ತದೆ. ಯಾರು ಯಾವ ಸರ್ಕಿಟ್ ಪೂರ್ಣಗೊಳಿಸಿದ್ದಾರೆ ಎಂಬುದನ್ನು ಪ್ಯಾನೆಲ್ ನಂತರ ಗುರುತಿಸುತ್ತದೆ.

## ಉಚಿತ ಆನ್‌ಲೈನ್ ವೈರಸ್ ಸ್ಕ್ಯಾನ್

ಆ್ಯಂಟಿ ವೈರಸ್ ಸಾಫ್ಟ್‌ವೇರ್‌ಗಾಗಿ ಹಣ ಖರ್ಚು ಮಾಡಲು ಬಹುತೇಕ ಭಾರತೀಯ ಬಳಕೆದಾರರು ಸಿದ್ಧರಿಲ್ಲ. ಅಂಥವರಿಗಾಗಿ ಉಚಿತ ಆನ್‌ಲೈನ್ ಆ್ಯಂಟಿವೈರಸ್ ಸೇವೆ 'ಬಿಟ್‌ಡಿಫೆಂಡರ್ ಕ್ವಿಕ್‌ಸ್ಕ್ಯಾನ್' ಈಗ ಲಭ್ಯ.

ಇದು 60 ಸೆಕೆಂಡುಗಳೊಳಗೆ ನಿಮ್ಮ ಕಂಪ್ಯೂಟರ್‌ನಲ್ಲಿರುವ ಕ್ರಿಯಾಶೀಲ ವೈರಸ್‌ಗಳನ್ನು ಪತ್ತೆ ಹಚ್ಚುತ್ತದೆ. ಇದು ದೂರಗಾಮಿ ಪ್ರಕ್ರಿಯೆಯಾಗಿದ್ದು ಮೂಲ ದಾಖಲೆಗಳ ಮೇಲೆ ಯಾವುದೇ ದುಷ್ಪರಿಣಾಮ ಬೀರಲಾರದು.

ಈ ವೆಬ್‌ಸೈಟ್‌ಗೆ ಹೋಗಿ ಸ್ಕ್ಯಾನ್ ಶುರು ಮಾಡಿ. ಇದಕ್ಕಾಗಿ ನೀವು ಯಾವುದೇ ಹೊಸ ಸಾಫ್ಟ್‌ವೇರ್ ಇನ್‌ಸ್ಟಾಲ್ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ. ಅಥವಾ ಕಾನ್‌ಫಿಗ್ಯುರೇಶನ್ ಮಾಡಿಕೊಳ್ಳಬೇಕಾದ ಅವಶ್ಯಕತೆಯೂ ಇಲ್ಲ. ಇದನ್ನು ಬ್ರೌಸರ್ ಎಕ್ಸ್‌ಟೆನ್ಶನ್ ಅಥವಾ ವಿಜೆಟ್ ಆಗಿ ಇನ್‌ಸ್ಟಾಲ್ ಮಾಡಿಕೊಂಡು ಆಗಾಗ ನಿಮ್ಮ ಕಂಪ್ಯೂಟರ್ ಅನ್ನು ಸ್ಕ್ಯಾನ್ ಮಾಡಬಹುದು.

ಇದಕ್ಕಾಗಿ bitdefender.com/en/ ಸಂಪರ್ಕಿಸಬಹುದು.

## ಉಬುಂಟು ಅಪ್ಲಿಕೇಶನ್




ಸ್ಮಾರ್ಟ್‌ಫೋನ್ ಅನ್ನು ಕಂಪ್ಯೂಟರ್ ಪರದೆಗೆ ಸಂಪರ್ಕ ಕಲ್ಪಿಸಿದಾಗ ಸಂಪೂರ್ಣ ಡೆಸ್ಕ್‌ಟಾಪ್ ಅನುಭವ ನೀಡುವಂತಹ ಉಬುಂಟು ಅಪ್ಲಿಕೇಶನ್ ಅನ್ನು ಕ್ಯಾನೋನಿಕಲ್ ಆ್ಯಂಡ್ರಾಯ್ಡ್‌ಗೂ ತಂದಿದೆ.

ಈ ಉಬುಂಟು ಅಪ್ಲಿಕೇಶನ್ ಸಾಮಾನ್ಯ ಕಂಪ್ಯೂಟರ್‌ನಲ್ಲಿ ಕಾರ್ಯನಿರ್ವಹಿಸುವ ರೀತಿಯಲ್ಲಿಯೇ ಸ್ಮಾರ್ಟ್‌ಫೋನ್‌ನಲ್ಲಿಯೂ ವರ್ತಿಸುತ್ತದೆ.

ಮಲ್ಟಿಪಲ್ ಕೋರ್ ಪ್ರೊಸೆಸರ್‌ನಿಂದಾಗಿ ಬಳಕೆದಾರರು ಮೊಬೈಲ್ ಫೋನ್ ಮತ್ತು ಡೆಸ್ಕ್‌ಟಾಪ್ ಅನ್ನು ಒಮ್ಮೆಲೇ ಬಳಸಬಹುದು. ಡೇಟಾ ಮತ್ತು ಇತರ ಸೇವೆಗಳು ಎರಡರಲ್ಲೂ ಒಂದೇ ರೀತಿಯಲ್ಲಿ ಲಭ್ಯ. ಕಾಂಟ್ಯಾಕ್ಟ್, ಕ್ಯಾಲೆಂಡರ್, ಮೆಸೇಜ್, ಕರೆಗಳನ್ನು ಡೆಸ್ಕ್‌ಟಾಪ್ ಮೂಲಕವೇ ಮಾಡಬಹುದು.

■ ಎಸ್. ತುಂಬೆ